ಎಂ ವಿ ಸಿ ನಂ. 186/2025 ಆರ್ ಡಬ್ಲ್ಯೂ 1

**ಈ ಸಾಕ್ಷಿಯನ್ನು ದಿನಾಂಕಃ 16.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಎದುರುದಾರರ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆಯೆಂದು ಪ್ರಮಾಣೀಕರಿಸುತ್ತೇನೆ.

ಮಧ್ಯಂತರ ಪರಿಹಾರ ಪಾವತಿ ರಶೀದಿಯ ಯಥಾ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಆರ್ – 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದ**

ಮೃತ ಗುಣಶೇಖರ ನಿಧಾನವಾಗಿ ತನ್ನ ಮೋಟರ್ ಸೈಕಲನಲ್ಲಿ ಹೋಗುತ್ತಿದ್ದರೂ ನಾನೇ ಅತೀವೇಗ ಮತ್ತು ಅಜಾಗ್ರಕತೆಯಿಂದ ಬಸ್ಸನ್ನು ಚಲಾಯಿಸಿ ಅಪಘಾತ ಪಡಿಸಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದು ನನ್ನ ವಿರುದ್ದ ದೋಷಾರೊಪಣೆ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು ದೋಷಾರೊಪಣೆ ಪಟ್ಟಿ ಯನ್ನು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿರುವ ಕಾರಣ ನಾನಾಗಲೀ ನಮ್ಮ ಇಲಾಖೆಯವರಾಗಲಿ ದೋಷಾರೊಪಣೆ ಪಟ್ಟಿ ಯನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ತನ್ನ ತಪ್ಪು ಎಂದು ಒಪ್ಪಿಕೊಂಡರೆ ತನ್ನ ಕೆಲಸಕ್ಕೆ ತೊಂದರೆ ಆಗುತ್ತದೆ ಎಂದು ಮೋಟರ್ ಸೈಕಲ್ ಚಾಲಕನಿಂದ ಈ ತಪ್ಪು ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ದಿನ ಮೋಟರ್ ಸೈಕಲ್ ಚಾಲ ಕನಿಧಾನವಾಗಿ ಬರುತ್ತಿದ್ದ ನಂದೇ ತಪ್ಪು ಎಂದರೆ ಸರಿಯಲ್ಲ. ಆದ ಕಾರಣ ಎದುರುದಾರರು ಪರಿಹಾರ ಕೊಡುವುದನ್ನು ತಪ್ಪಿಸಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ.
ಓ ಹೇ ಕೇ ಸರಿ ಇದೆ.

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.